ಶ್ರೀ ಬಸವರಾಜ್ ಪಾಟೀಲ್: ಈಗಾಗಲೇ ದೊಡ್ಡ ದೊಡ್ಡ ಫಾರಂಗಳನ್ನು ಶ್ರೀಮಂತರು ತೆಗೆದು, ಈ ಬಡ ಕೋಳಿ ಸಾಕಾಣೆದಾರರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಶ್ರೀಮಂತರೂ ದೊಡ್ಡ ದೊಡ್ಡ ಫಾರಂಗಳನ್ನು ತೆಗೆಯುವುದನ್ನು ಬ್ಯಾನ್ ಮಾಡುವಂಥ ವಿಚಾರ ಸರ್ಕಾರದಲ್ಲಿ ಏನಾದರೂ ಇದೆಯೇ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಶ್ರೀಮಂತರು ದೊಡ್ಡ ದೊಡ್ಡ ಫಾರಂಗಳನ್ನು ತೆರೆಯಲಾರದಂತೆ ಏನು ಮಾಡಬೇಕೆಂದು ಸರ್ಕಾರದಲ್ಲಿ ಅದರ ಬಗ್ಗೆ ಪರಿಶೀಲನೆ ಮಾಡಿ ಅವಶ್ಯವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ : ತಾವು ಕೋಳಿ ಮಾರಾಟ ಮಂಡಳಿ ಬಗ್ಗೆ ಹೇಳಲಿಲ್ಲ.

ಶ್ರೀ ಬಸವರಾಜ್ ಪಾಟೀಲ್ : ಬಡ್ಜೆಟ್‌ನಲ್ಲಿ ಹಣ ಇಡಲಾಗಿದೆ. ಅದಷ್ಟು ಬೇಗನೆ ಪ್ರಾರಂಭ ಮಾಡಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕೋಳಿ ಮಾರಾಟ ಮಂಡಳಿಯನ್ನು ನೀವು ಮಾಡಲಿಕ್ಕೆ ಹೋಗಬೇಡಿ. ಎಗ್ ಬೋರ್ಡ್‌ನ್ನು ಮಾಡಲಿಕ್ಕೆ ಹೋಗಬೇಡಿ. ಇವುಗಳಿಂದ ಲಂಚ ಜಾಸ್ತಿಯಾಗುತ್ತದೆಯೇ ವಿನಃ ಬೇರೇನೂ ಆಗುವುದಿಲ್ಲ. ಈ ಬೋರ್ಡ್‌ಗಳ ಕತೆ ನಮಗಲ್ಲಾ ಗೊತ್ತಿದೆ. ಈ ಬೋರ್ಡ ಮಾಡುವ ಬದಲಾಗಿ, ಕೋಳಿ ಸಾಕುವವರಿಗೆ , ಕೋಳಿ ತಿನ್ನುವವರಿಗೆ ಅದನ್ನು ಬಿಟ್ಟುಬಿಡಿ, ಮಧ್ಯದಲ್ಲಿ ನೀವು ಕಾನೂನು ಮಾಡಲಿಕ್ಕೆ ಹೋಗಬೇಡಿ. ಪಾಪ, ನೀವು ಹೊಸದಾಗಿ ಬಂದಿದ್ದೀರಿ. ನಿಮ್ಮ ಇಲಾಖೆಯ ಅಧಿಕಾರಿಗಳಿಗೆ ನನ್ನ ಸಲಹೆ ಏನೆಂದರೆ, ಈ ಕೋಳಿಗಳಿಗೆ ಬಹಳ ರೋಗ ಬರುತ್ತದೆ. ಅದಕ್ಕೆ ಕೊಡುವಂಥ ಇಂಜೆಕ್ಷನ್ ನಿಮ್ಮ ವೆಟರ್ನರಿ ಆಸ್ಪತ್ರೆಯಲ್ಲಿ ಇಟ್ಟರೆ ನಾವು ಬಹಳ ಕೃತಜ್ಞರಾಗಿರುತ್ತೇವೆ. ಅದನ್ನು ಇಡುವುದಕ್ಕೆ ಸಾಧ್ಯವೇ ಎಂದು ಮಾನ್ಯ ಮಂತ್ರಿಗಳು ಹೇಳಲಿ

ಶ್ರೀ ಬಸವರಾಜ ಪಾಟೀಲ್ : ಮಾನ್ಯ ವಿರೋಧ ಪಕ್ಷದ ಉಪನಾಯಕರು ಹೇಳಿದ ಪ್ರಕಾರ ಕೋಳಿಗಳಿಗೆ ಕೊಡುವ ಇಂಜಕ್ಷನ್ ನಮ್ಮ ಹತ್ತಿರ ಸಾಕಷ್ಟು ಇವೆ. ಇಷ್ಟು ವಿಶಾಸ್ವವನ್ನು ತಮಗೆ ಕೊಡುತ್ತೇನೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ: ಕಳೆದ ಒಂದು ವರ್ಷದಿಂದ ಕೋಳಿ ಆಹಾರದ ಬೆಲೆ ಏರಿರುವುದರಿಂದ ಕೋಳಿ ಮೊಟ್ಟೆಗಳು ಮಾರ್ಕೆಟ್‌ನಲ್ಲಿ ಸಿಕ್ಕುತ್ತಿಲ್ಲ. ಮೊಟ್ಟೆಗಳ ಬೆಲೆ ಜಾಸ್ತಿಯಾಗಿದೆ. ಒಂದು ರೂಪಾಯಿಗೆ ಒಂದು ಮೊಟ್ಟೆಯಾಗಿದೆ. ಎಷ್ಟೋ ಜನರು ಕೋಳಿ ಸಾಕಾಣಿಕೆದಾರರು ಲಾಸ್ ಆಗುತ್ತದೆಂದು ಕೋಳಿ ಫಾರಮ್‌ಗಳನ್ನು ತೆಗೆದರು. ಕೋಳಿ ಸಾಕಾಣಿಕೆಗೆ ಈಗ ಬಹಳ ತೊಂದರೆಯಾಗಿದೆ. ಎಷ್ಟೋ ಕೋಳಿ ಫಾರಮ್‌ಗಳು ಮುಚ್ಚಿಹೋಗಿವೆ. ಕೋಳಿ ಆಹಾರ ಅವರಿಗೆ ಸರಿಯಾದ ಬೆಲೆಯಲ್ಲಿ ಸಿಕ್ಕಿ ಜನರಿಗೆ ಕೋಳಿಮೊಟ್ಟೆ ಸ್ವಲ್ಪ ಕಡಿಮೆ ಬೆಲೆಯಲ್ಲಿ ಸಿಕ್ಕುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಯೇ?

ಶ್ರೀ ಬಸವರಾಜ್ ಪಾಟೀಲ್ : ಮಾನ್ಯ ಸದಸ್ಯರ ವಿಚಾರವನ್ನು ಅದಷ್ಟು ಸಹಾನುಭೂತಿಯಿಂದ ಪರಿಶೀಲನೆ ಮಾಡಲಾಗುವುದು.

1990-91ನೇ ಸಾಲಿನಲ್ಲಿ ಮಂಜೂರಾದ ಹೊಸ ಪಶುವೈದ್ಯ ಶಾಲೆಗಳ ಸಂಖ್ಯೆ

2234 - ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1988-89, 1989-90 ಮತ್ತು 1990-91ನೇ ಸಾಲಿನಲ್ಲಿ ಮಂಜೂರಾದ ಹೊಸ ಪಶುವೈದ್ಯ ಆಸ್ಪತ್ರೆಗಳೆಷ್ಟು? (ವಾರ್ಷಿಕವಾರು ಮಾಹಿತಿ ನೀಡುವುದು)*

ಆ) *ಚನ್ನಪಟ್ಟಣ ತಾಲ್ಲೂಕಿನಲ್ಲಿ ಹೊಸ ಪಶುವೈದ್ಯ ಆಸ್ಪತ್ರೆಗಳನ್ನು ಮಂಜೂರು ಮಾಡಲು ಪ್ರಸ್ತಾವನೆಗಳೇನಾದರೂ ಸರ್ಕಾರದ ಮುಂದಿದೆಯೇ?*

ಇ) *ಹಾಗಿದ್ದಲ್ಲಿ ಎಂದು ಮಂಜೂರಾತಿ ನೀಡಲಾಗುವುದು?*

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು) :

ಅ)

ವರ್ಷ	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸುವುದು:	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವನ್ನು ಉನ್ನತೀಕರಿಸುವುದು:
1) 1988-89	ಇಲ್ಲ	ಇಲ್ಲ
2) 1989-90	150	50
3) 1990-91	200	61

ಆ) ಇಲ್ಲ

ಇ) ಜಿಲ್ಲಾ ಪರಿಷತ್‌ನಿಂದ ಪ್ರಸ್ತಾವನೆ ಬಂದ ಮೇಲೆ.

ಶ್ರೀ ಸಾದತ್ ಅಲಿಖಾನ್: ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರಗಳನ್ನು ಕೊಟ್ಟಿದ್ದಾರೆ. 1988-89ರಲ್ಲಿ ಒಂದೂ ವೆಟರ್ನರಿ ಆಸ್ಪತ್ರೆ ಓಪನ್ ಮಾಡಿಲಿಲ್ಲ. 1989-90 ರಲ್ಲಿ 150 ಆಗಿದೆ. 1990-91ರಲ್ಲಿ 200 ಆಗಿದೆ. ಈಗ ಚನ್ನಪಟ್ಟಣ ತಾಲ್ಲೂಕಿನದು ಒಂದೂ ಪೆಂಡಿಂಗ್ ಇಲ್ಲ ಎಂದು ಹೇಳಿದ್ದಾರೆ. ಆದರೆ ಮೂರು ಪೆಂಡಿಂಗ್ ಇದೆ. ಚನ್ನಪಟ್ಟಣ ತಾಲ್ಲೂಕಿನಲ್ಲಿ ಮೂರು ರೆಕಮೆಂಡ್ ಆಗಿ ಬಂದಿದೆ. ಆದರೆ ನೀವು ಇನ್‌ಫರ್‌ಮೇಷನ್ ತಪ್ಪು ಕೊಟ್ಟಿದ್ದೀರಿ. ಮತ್ತೆ ಈ ವೆಟರ್ನರಿ ಆಸ್ಪತ್ರೆಯನ್ನು ಸ್ಯಾಂಕ್ಷನ್ ಮಾಡಬೇಕಾದರೆ, What are the norms and what is the expenditure for one veterinary hosspital? ಇದು ಒಂದನೆಯದು ಎರಡನೆಯದು ಅಪ್‌ಗ್ರೇಡಿಂಗ್ ಎಂದು ಮಾಡಿದ್ದೀರಲ್ಲಾ ಅದಕ್ಕೆ ಎಷ್ಟು ಖರ್ಚಾಗುತ್ತದೆ.

ಶ್ರೀ ಬಸವರಾಜ ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಪ್ರಕಾರ ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಪಶು ಚಿಕಿತ್ಸಾಲಯವಾಗಿ ಅಪ್‌ಗ್ರೇಡ್ ಮಾಡಿದರೆ ಪ್ರತಿವರ್ಷ ನಾವು 1.15 ಲಕ್ಷ ರೂಪಾಯಿಗಳನ್ನು ಹೆಚ್ಚು ವೆಚ್ಚ ಮಾಡಬೇಕಾಗುತ್ತದೆ. ಈಗ ತಾವು ಕೇಳಿದ ಪ್ರಕಾರ ಚನ್ನಪಟ್ಟಣದಲ್ಲಿ ಈ ವರ್ಷದಲ್ಲಿ ಯಾವುದಾದರೂ ವೆಟರ್ನರಿ ಆಸ್ಪತ್ರೆಯನ್ನು ತೆರೆಯುತ್ತೀರಾ ಎಂಬುದಕ್ಕೆ ಈ ವರ್ಷದಲ್ಲಿ ಜಿಲ್ಲಾ ಪರಿಷತ್ತಿನವರು ಯಾವುದೇ ಪ್ರೊಪೋಸಲ್ಲನ್ನೂ ಕಳಿಸಿಲ್ಲವಾದ್ದರಿಂದ ಈ ವರ್ಷ ಯಾವುದೂ ಇಲ್ಲವೆಂದು ಹೇಳಿದ್ದೇನೆ.

ಶ್ರೀ ಸಾದತ್ ಅಲಿಖಾನ್: ಈ ವರ್ಷ 1991-92 ರಲ್ಲಿ ಎಷ್ಟು ಪಶು ಆಸ್ಪತ್ರೆಗಳನ್ನು ತೆರೆಯಬೇಕೆಂದು ನೀವು ಟಾರ್ಗೆಟ್‌ನ್ನು ಇಟ್ಟುಕೊಂಡಿದ್ದೀರಿ?

ಶ್ರೀ ಬಸವರಾಜ ಪಾಟೀಲ್: ಈ ವರ್ಷ 220ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ತೆರೆಯಬೇಕೆಂದು ನಾವು ಟಾರ್ಗೆಟ್ ಇಟ್ಟುಕೊಂಡಿದ್ದೇವೆ..

ಗೋಮಾಳ ಭೂಮಿಯಲ್ಲಿ ದುರ್ಬಲರಿಗೆ ನಿವೇಶನ.

2316 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗೋಮಾಳದ ಭೂಮಿಯನ್ನು ದುರ್ಬಲವರ್ಗದವರಿಗೆ ನಿವೇಶನ ಮಂಜೂರು ಮಾಡಲು ಸರ್ಕಾರ ನಿರ್ಧರಿಸಿದೆಯೆ?*